**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು**

ದಿನಾಂಕಃ 06ನೇ ಆಗಸ್ಟ್ ತಿಂಗಳು 2025ರಂದು

**ಸಿಸಿ ನಂ.290/2024**

| | |
|---|---|
| **ಫಿರ್ಯಾದುದಾರರುಃ** | ಆರ್.ನಾರಾಯಣ, ಬಿನ್ ಹೆಚ್.ಎಂ.ರಾಮಣ್ಣ, ವಯಸ್ಸು 53 ವರ್ಷ, ವಾಸಃ ಕರೀಗೌಡಸ್ಟ್ರೀಟ್, ಹುಣಸೂರು ಟೌನ್, ಮೈಸೂರು ಜಿಲ್ಲೆ. |
| | **- ವಿರುದ್ಧ -** |
| **ಆರೋಪಿಃ** | ಬಿ.ಪ್ರಸಾದ್, ಬಿನ್ ಬೊಮ್ಮೇಗೌಡ, ವಯಸ್ಸು 45ವರ್ಷ, ವಾಸಃ ನಂ.95, ಇಂಡೇನ್ ಗ್ಯಾಸ್ ಎದುರು, ಮಂಜುನಾಥ ಲೇಔಟ್, ಹುಣಸೂರು ಟೌನ್, ಮೈಸೂರು ಜಿಲ್ಲೆ. |

**ದಂಡ ಪ್ರಕ್ರಿಯೆ ಸಂಹಿತೆಯ ಕಲಂ 251 ರ ಅಡಿಯಲ್ಲಿ ಆರೋಪಣಾ ಸಾರಾಂಶ**

ಆರೋಪಿಯಾದ ನೀವು ವ್ಯಾಪಾರಸ್ಥರು ಮತ್ತು ಹುಣಸೂರು ಟೌನ್ ನಲ್ಲಿ ಭೂ ಅಭಿವೃದ್ಧಿಕಾರರಾಗಿದ್ದು, ನೀವು ಮತ್ತು ಫಿರ್ಯಾದಿದಾರರಾದ ಆರ್.ನಾರಾಯಣ ರವರು 20 ವರ್ಷಗಳಿಂದ ಪರಿಚಿತರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ನೀವು 05.02.2024 ರಲ್ಲಿ ಫಿರ್ಯಾದುದಾರರಿಂದ ನಿಮ್ಮ ಶುಂಠಿ ವ್ಯಾಪಾರಕ್ಕಾಗಿ ರೂ.7,00,000/-ಗಳ ಕೈ ಸಾಲವನ್ನು ವೆಂಕಟೇಶ, ಬಿನ್ ಸಣ್ಣೇಗೌಡ, ವಯಸ್ಸು 50ವರ್ಷ, ವಾಸಃ ಕರೀಗೌಡನ ಬೀದಿ, ಹುಣಸೂರು ಟೌನ್ ಇವರ ಉಪಸ್ಥಿತಿಯಲ್ಲಿ 1% ಬಡ್ಡಿಯೊಂದಿಗೆ ಒಂದು ತಿಂಗಳ ಒಳಗೆ ಮರುಪಾವತಿಸುವುದಾಗಿ ಹೇಳಿ ಸಾಲವಾಗಿ ಪಡೆದುಕೊಂಡಿದ್ದು, ಆರೋಪಿಯಾದ ನೀವು ಮೇಲೆ ತಿಳಿಸಿದ ಸಾಲದ ಮೊತ್ತವನ್ನು ಮರುಪಾವತಿಸಲು ದಿನಾಂಕ 06.03.2024 ರಂದು ಸ್ವಯಂಪ್ರೇರಣೆಯಿಂದ 29.04.2024 ರ ದಿನಾಂಕ ನಮೂದಿಸಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹುಣಸೂರು ಶಾಖೆಯ ಚೆಕ್ ಸಂಖ್ಯೆ 653707 ಅನ್ನು ರೂ.7,00,000/-

ಗಳಿಗೆ ಫಿರ್ಯಾದಿದಾರರಿಗೆ ನೀಡಿದ್ದು, ಅದನ್ನು ಫಿರ್ಯಾದಿದಾರರು ತಮ್ಮ ಖಾತೆ ಹೊಂದಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಸ್.ಜೆ.ರಸ್ತೆ, ಹುಣಸೂರು ಶಾಖೆಯ ಮೂಲಕ ದಿನಾಂಕಃ 29.04.2024ರಂದು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕ 04.05.2024 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದಿದಾರರು ದಿನಾಂಕ 09.05.2024ರಂದು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸನ್ನು ನೀಡಿದ್ದು, ಸದರಿ ನೋಟೀಸ್ ನ್ನು ನೀವು ಉದ್ದೇಶಪೂರ್ವಕವಾಗಿ ತಿರಸ್ಕರಿಸಿದ್ದು, ಈ ಬಗ್ಗೆ ನಿಮಗೆ ಖುದ್ದು ಮಾಹಿತಿ ಇದ್ದರೂ ಸಹ ನೀವು ಚೆಕ್‌ನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ನೋಟೀಸ್ ಗೆ ಉತ್ತರವನ್ನಾಗಲಿ ನೀಡದೆ ಇರುವುದರಿಂದ ನೀವು ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ 138ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು. |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ